# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಣ್ಣಶೆಟ್ಟಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಮರಂಕಶೆಟ್ಟಿ | **27.12.2023** |
| ವಯಸ್ಸು | : | 61 ವರ್ಷ | |
| ವೃತ್ತಿ | : | ಕೂಲಿ ಕೆಲಸ | ಪಿ.ಡಬ್ಲೂಃ 5 |
| ವಾಸಸ್ಥಳ | : | ತಗಡೂರು | ಸಿ.ಡಬ್ಲೂಃ 6 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ನೋಡಿದ್ದೇನೆ. ಫ್ರಾಸಾ 1 , 2 ರವರ ಪರಿಚಯವಿದೆ. ಚಾಸಾ– 7 ರವರ ಪರಿಚಯ ಇದೆ. 2 ಅಥವಾ 3 ವರ್ಷಗಳ ಹಿಂದೆ ಮಧ್ಯಾಹ್ಣ 12.30 ಅಥವಾ 1 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಕರೆದುಕೊಂಡು ಫ್ರಾಸಾ 1 ರವರ ಬಾಳೆತೋಟಕ್ಕೆ ಬಂದಿದ್ದರು. ಫ್ರಾಸಾ 2, ನನ್ನನ್ನು ಹಾಗೂ ಚಾಸಾ– 7 ರವರನ್ನು ಗ್ರಾಮದ ಹಿರಿಯನಾಗಿ ಅಲ್ಲಿಗೆ ಕರೆದುಕೊಂಡು ಬಂದಿದ್ದರು. ಆರೋಪಿ ಮಚ್ಚಿನಿಂದ ಹೊಡೆದಿದ್ದಾಗಿ ಬಾಳೆಯ ತೋಟದಲ್ಲಿ ಬಾಳೆಯ ಗಿಡದ ಬುಡದಲ್ಲಿ ಬಿದ್ದಂತಹ ಮಚ್ಚನ್ನು ತೋರಿಸಿದರು. ಪೊಲೀಸರು ಆ ಮಚ್ಚನ್ನು ತಮ್ಮ ವಶಕ್ಕೆ ಪಡೆದರು. ಸ್ಥಳದಲ್ಲಿ ನಾನು ನೋಡುತ್ತಾ ನಿಂತಿದ್ದೆ . ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ . ಅಮಾನತ್ತು ಪಂಚನಾಮೆಯನ್ನು ನಿಪಿ.– 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.–9 (ಎ) ಎಂದು ಗುರುತಿಸಲಾಯಿತು. ನಿಪಿ. 9 ಕ್ಕೆ ಚಾಸಾ 7 ಸಹ ಸಹಿ ಮಾಡಿದ್ದಾರೆ. ಮು. ಮಾ. 1 ಆ ದಿನ ಪೊಲೀಸರು ವಶಕ್ಕೆ ಪಡೆದ ಮಚ್ಚಾಗಿದೆ. ಮು. ಮಾ. 1 ಕ್ಕೆ ಹಚ್ಚಿದ ಚೀಟಿಯ ಮೇಲೆ

ನನ್ನ ಸಹಿ ಇದೆ. ಮು. ಮಾ. 2 ನ್ನು ಆ ದಿನ ಆರೋಪಿ ಪೊಲೀಸರಿಗೆ ತೋರಿಸಿದ ಅದು ತೋಟದಲ್ಲಿಯೇ ಬಿದ್ದಿತ್ತು. ಅದನ್ನು ಸಹ ಪೊಲೀಸರು ಪ್ಯಾಕ್ ಮಾಡಿ ವಶಕ್ಕೆ ಪಡೆದರು. ಮು. ಮಾ. 2 ಕ್ಕೆ ಹಚ್ಚಿದ ಚೀಟಿಯ ಮೇಲೆ ನನ್ನ ಸಹಿ ಇದೆ. ಮೇಲೆ ಹೇಳಿದ ವಿಷಯಗಳ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಮು. ಮಾ. 2 ಯಾರ ಸ್ವೆಟರ್ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2.ದಿಃ 19.06.2020 ರಂದು ಮಧ್ಯಾಹ್ನ 12.30 ಗಂಟೆಯಿಂದ 1.30 ಗಂಟೆಯವರೆಗೆ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಬರೆದರು ಎಂದರೆ ನಿಜ. ಪಂಚನಾಮೆ ಗೆ ಹೋಗುವ ಪೂರ್ವದಲ್ಲಿ ಪೊಲೀಸರು ನನ್ನನ್ನು ಹಾಗೂ ಚಾಸಾ- 7 ರವರನ್ನು ಠಾಣೆಗೆ ಕರೆಸಿದ್ದರು ಎಂದರೆ ನಿಜ. ಠಾಣೆಯಲ್ಲಿ ಆರೋಪಿ ಇದ್ದು , ಜೀಪಿನಲ್ಲಿ ಆರೋಪಿ ಹೇಳಿದ ಸ್ಥಳಕ್ಕೆ ಪೊಲೀಸರು ನಮ್ಮನ್ನು ಕರೆದುಕೊಂಡು ಹೋದರು ಎಂದರೆ ನಿಜ. ಆರೋಪಿ ಪಾರ್ಮ ಹೌಸ್ ಗೇಟ್ ಹತ್ತಿರ ಜೀಪ ನಿಲ್ಲಿಸುವಂತೆ ಹೇಳಿ ಜೀಪನಿಂದ ತಾನೇ ಮುಂದಾಗಿ ಹೋಗಿ ಮಚ್ಚು ಮತ್ತು ಸ್ವೆಟರ್ ಎಸೆದ ಜಾಗ ತೋರಿಸಿದ ಎಂದರೆ ನಿಜ. ಆರೋಪಿ ಘಟನೆಯ ದಿನ ಮು. ಮಾ. 2 ಸ್ವೆಟರ್ ಅನ್ನು ಧರಿಸಿದ್ದೆ ಎಂದು ಹೇಳಿದ್ದರಿಂದ ಅದನ್ನು ವಶಕ್ಕೆ ಪಡೆದರು ಎಂದರೆ ನಿಜ. ನಿಪಿ. 9 ಕ್ಕೆ ಆರೋಪಿ ಸಹ ಸಹಿ ಮಾಡಿದ್ದಾನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ</u>**

3. ಬಾಳೆ ತೋಟದಲ್ಲಿ ಮು. ಮಾ. 2 ಸಹ ಬಿದ್ದಿತ್ತು. ಆ ದಿನ ನಾನು ಮು. ಮಾ. 2 ನ್ನು ನೋಡಿದ್ದೆ. ಮು. ಮಾ. 2 ಆಗ ನಾನು ನೋಡಿದಾಗ ಚೆನ್ನಾಗಿತ್ತೋ ಅಥವಾ ಹರಿದಿತ್ತೋ ಗಮನಿಸಿಲ್ಲ. ಜನ ಜಾಸ್ತಿ ಇದ್ದುದ್ದರಿಂದ ನೋಡಲು ಆಗಲಿಲ್ಲ. ಆ ದಿನ ಫ್ರಾಸಾ 2 ರವರು ಸಹ ಸ್ಥಳದಲ್ಲಿ ಇದ್ದರು. ಫ್ರಾಸಾ 2 ರವರಿಂದ ಮು. ಮಾ. 1 ಮಚ್ಚನ್ನು ಪೊಲೀಸರು ತರಿಯಿಸಿಕೊಂಡರು ಎಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಮಚ್ಚು ಬಿದ್ದ ಸ್ಥಳವನ್ನು ತೋರಿಸಿದ. ಮಹಜರ ಬರೆಯುವುದು ಮುಗಿದ ನಂತರ ಆರೋಪಿ ಮಚ್ಚು ಬಿದ್ದ ಸ್ಥಳ ತೋರಿಸಿದ.

4. ಫ್ರಾಸಾ 2 ರವರು ನನ್ನನು ಆ ದಿನ ಕರೆದುಕೊಂಡು ಹೋಗಿದ್ದರು ಹಾಗಾಗಿ ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ. ಆರೋಪಿ ಆ ದಿನ ಮಚ್ಚು ಇದ್ದ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮು. ಮಾ. 1 ಮತ್ತು 2 ನ್ನು ಆ ದಿನ ನಮ್ಮ ಸಮಕ್ಷಮ ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಫ್ರಾಸಾ 2 ರವರ ಹೇಳಿಕೆಯ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

27.12.2023

(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.